4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಧಾರವಾಡರವರ
ನ್ಯಾಯಾಲಯದಲ್ಲಿ

ಎಸ್.ಸಿ. ನಂಬರಃ 27/2022

ಆರೋಪಿಯ ಹೆಸರು : ಶಿವಶಂಕರ ತಂದೆ ದ್ಯಾಮಣ್ಣ ಗರಗ,
ವಯಾಃ 30 ವರ್ಷ, ಉದ್ಯೋಗಃ ಪೆಂಟರ
ವಾಸಃ ಅಶೋಕ ರೋಡ , ಅಳ್ನಾವರ,
ಹಾಲಿ ವಸ್ತಿ ಧಾರವಾಡ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿತನ ಹೇಳಿಕೆ**

ಪ್ರಶ್ನೆ 1) ನ್ಯಾಯಾಲಯದಲ್ಲಿ ವಿಚಾರಣೆ ಮಾಡಿದ ಸಾಕ್ಷಿಗಳ ಹೇಳಿಕೆಯನ್ನು ನೀವು ಕೇಳಿದ್ದೀರಾ?

ಉತ್ತರಃ ತಿಳಿಯಿತು

ಪ್ರಶ್ನೆಃ 2) ಅ.ಸಾ–1 ತನುಜಾ ಸುಣಗಾರ ಇವರು ತಮ್ಮ ಸಾಕ್ಷಿಯಲ್ಲಿ ಹೇಳಿದ್ದೇನೆಂದರೆ ಆರೋಪಿಯು ತನ್ನ ಅಕ್ಕ ಕವಿತಾಳ ಗೆಳತಿಯ ಗೆಳೆಯ ಇದ್ದು 4–5 ವರ್ಷಗಳ ಹಿಂದೆ ತನ್ನ ಅಕ್ಕನ ಗೆಳತಿ ಆರೋಪಿಯನ್ನು ಅಕ್ಕಳಿಗೆ ಕೆಲಸ ಕೊಡಿಸುತ್ತೇನೆ ಅಂತಾ ಹೇಳಿದ್ದರಿಂದ ತಮ್ಮ ಮನೆಗೆ ಕರೆದುಕೊಂಡು ಬಂದಿದ್ದು, ಆಗಿನಿಂದ ತನಗೆ ಆರೋಪಿಯ ಪರಿಚಯ ಹಾಗೂ ಅವನು ತನಗೆ ಕೆಲಸ ಕೊಡಿಸುತ್ತೇನೆ ಅಂತಾ ಹೇಳಿದನು ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ: 3) ಅ.ಸಾ-1 ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ಆರೋಪಿಯು ತನ್ನ ಜೊತೆ ಪೋನ ಸಂಪರ್ಕದಲ್ಲಿ ಇದ್ದು ತನ್ನನ್ನು ಮದುವೆ ಆಗುತ್ತೇನೆ ಅಂತಾ ಹೇಳಿ ತನಗೆ ಪೋನನಲ್ಲಿ ಮೇಸೇಜ್ ಮಾಡುವುದನ್ನು ಮುಂದುವರೆಸಿದನು, ನಂತರ ತಮ್ಮಿಬ್ಬರ ಮಧ್ಯ ಪ್ರೀತಿ ಆಯಿತು, ನಂತರ ಆರೋಪಿಯು ಕೆಲಸ ಕೊಡಿಸುತ್ತೇನೆ ಅಂತಾ ಹೇಳಿ ತನ್ನನ್ನು ಕೊಲ್ಲಾಪೂರಕ್ಕೆ ಕರೆದುಕೊಂಡು ಹೋದನು ಮತ್ತು ಧಾರವಾಡಕ್ಕೆ ಬರಲು ಬಿಡಲಿಲ್ಲ, ಮೊಬೈಲ ಪೋನನ್ನು ಕೂಡಾ ಕಸಿದುಕೊಂಡಿದ್ದನು ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ: ಸುಳ್ಳು

ಪ್ರಶ್ನೆ: 4) ಅ.ಸಾ-1 ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ಆರೋಪಿಯು ಒಂದು ವರ್ಷಗಳ ಕಾಲ ಕೊಲ್ಲಾಪೂರದಲ್ಲಿ ತನ್ನನ್ನು ತನ್ನ ಜೊತೆ ಇಟ್ಟುಕೊಂಡಿದ್ದನು, ಅಕ್ಕ ತನ್ನ ಮೊಬೈಲ್ಗೆ ಪೋನ ಮಾಡಿದರೆ ಆರೋಪಿಯು ಕೊಲ್ಲಾಪೂರದಲ್ಲಿ ಕೆಲಸ ಮಾಡುತ್ತಿದ್ದೇನೆ ಅಂತಾ ಹೇಳು ಮತ್ತು ಅವನು ನನ್ನ ಜೊತೆ ಇಲ್ಲ ಅಂತಾ ಹೇಳಬೇಕು ಅಂತಾ ಹೇಳುತ್ತಿದ್ದನು ಮತ್ತು ಚಾಕು ತೋರಿಸಿ ತನಗೆ ಹೆದರಿಸಿ ಪೋನನಲ್ಲಿ ಮಾತನಾಡುವಾಗ ಮುಂದೆಯೇ ಕೂಡುತ್ತಿದ್ದನು ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ: ಸುಳ್ಳು

ಪ್ರಶ್ನೆ 5) ಅ.ಸಾ–1 ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ತಾನು ಹೆದರಿ ಆರೋಪಿಯೊಂದಿಗೆ ವಾಸ ಇರುವ ಬಗ್ಗೆ ತನ್ನ ತಂದೆ–ತಾಯಿಗೆ ಹೇಳಲಿಲ್ಲ, ಆರೋಪಿಯು ಕೊಲ್ಲಾಪೂರದಲ್ಲಿದ್ದಾಗ ಸಾಲ ಮಾಡಿಕೊಂಡಿದ್ದು, ಒಂದು ವರ್ಷದ ನಂತರ ಕರೋನಾ ಬಂದ ಕಾರಣ ಅಲ್ಲಿ ಯಾವುದೇ ಕೆಲಸ ಸಿಗದಿದ್ದಾಗ ತನ್ನನ್ನು ಧಾರವಾಡದ ಕಮಲಾಪೂರಕ್ಕೆ ಕರೆದುಕೊಂಡು ಬಂದು ಒಂದು ಬಾಡಿಗೆ ಮನೆಯಲ್ಲಿ ಇದ್ದೆವು ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 6) ಅ.ಸಾ–1 ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ತಾವು ಕಮಲಾಪೂರದಲ್ಲಿ ಬಾಡಿಗೆ ಮನೆಯಲ್ಲಿ ಇರಲು ಪ್ರಾರಂಭ ಮಾಡಿದ ಮೂರು ತಿಂಗಳ ನಂತರ ಆರೋಪಿಯು ಕುಡಿದು ಬಂದು ಹೊಡಿ–ಬಡಿ ಮಾಡಿದ್ದರಿಂದ ತನಗೆ ಆರೋಗ್ಯಕ್ಕೆ ತೊಂದರೆ ಆಯಿತು ಮತ್ತು ಆರಾಮ ಇಲ್ಲದಿದ್ದಾಗ ತಾನು ಒತ್ತಾಯವಾಗಿ ಆರೋಪಿಯಿಂದ ಫೋನ ಕಸಿದುಕೊಂಡು ತನ್ನ ತಾಯಿಗೆ ಫೋನ ಮಾಡಿ ವಿಷಯ ತಿಳಿಸಿದೆನು ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆಃ 7) ಅ.ಸಾ–1 ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ತಾಯಿಯು ತನಗೆ ಧಾರವಾಡದ ಸಿಬಿಟಿ ಬಸ ಸ್ಟ್ಯಾಂಡಗೆ ಬರಲು ಹೇಳಿದ್ದು, ತಾನು ಅಲ್ಲಿಗೆ ಹೋಗಿ ನಂತರ ತನ್ನ ತಾಯಿಯ ಮನೆಗೆ ಹೋದೆನು, 15 ದಿನಗಳು ಆದ ಮೇಲೆ ಆರೋಪಿಯು ತನಗೆ ಪೋನ ಮಾಡಿ ನಿನಾಗಿ ವಾಪಸ್ಸು ಬಾ ಇಲ್ಲವಾದರೆ ಮನೆಗೆ ಬಂದು ಗಲಾಟೆ ಮಾಡಿ ಮರ್ಯಾದೆ ತೆಗೆಯುತ್ತೇನೆ ಅಂತಾ ಹೇಳಿದನು ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆಃ 8) ಅ.ಸಾ–1 ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ನಂತರ ಆರೋಪಿಯು ದಿನಾಂಕ 21.02.2022 ರಂದು ಬೆಳಿಗ್ಗೆ 11.00 ಗಂಟೆ ಸುಮಾರಿಗೆ ಮನೆಯಲ್ಲಿ ತಾನು ಒಬ್ಬಳೆ ಇದ್ದಾಗ ಆರೋಪಿಯು ತಮ್ಮ ಮನೆಗೆ ಬಂದು ಬಾಗಿಲನ್ನು ಬಡಿದನು, ತಾನು ತನ್ನ ತಂದೆ ಬಂದಿರಬಹುದು ಅಂತಾ ಬಾಗಿಲು ತೆಗೆದಿದ್ದು, ಆರೋಪಿಯು ಒಳಗೆ ಬಂದು ತನಗೆ ಹೊಡೆಯಲು ಪ್ರಾರಂಭಿಸಿ ಅವಾಚ್ಯ ಶಬ್ದಗಳಾದ ಹಾದರಗಿತ್ತಿ, ಹಡಸು ಅಂತಾ ಬೈದನು ಮತ್ತು ಕೈಯಿಂದ ಕಪಾಳಗೆ ಹೊಡೆದನು ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 9) ಅ.ಸಾ–1 ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ತನ್ನನ್ನು ಹೊರಗೆ ಏಳೆದುಕೊಂಡು ಹೋಗುತ್ತಿದ್ದಾಗ ತಮ್ಮ ಮನೆಯಲ್ಲಿ ಬಾಡಿಗೆಗೆ ಇದ್ದ ಅಂಬಿಕಾ ಕಟ್ಟಿಮನಿ ಏನ್ನುವವರು ಬಂದು ಗಲಾಟೆ ಬಿಡಿಸಲು ಪ್ರಯತ್ನ ಮಾಡಿದರೂ ಆರೋಪಿ ಅವರ ಮಾತು ಕೇಳಲಿಲ್ಲ ಹಾಗೂ ಆರೋಪಿಯು ತನ್ನನ್ನು ಬಿಟ್ಟು ಹೋಗುತ್ತಿರುವಂತೆ ಸ್ವಲ್ಪ ಮುಂದೆ ಹೋಗಿ ಮತ್ತೆ ವಾಪಸ್ಸು ಬಂದು ಚಾಕುವಿನಿಂದ ಹೊಟ್ಟೆಗೆ ಹಾಕಲು ಬಂದನು, ಆಗ ಚಾಕು ತನ್ನ ಎಡಗಾಲಿನ ತೊಡೆಗೆ ಚುಚ್ಚಿತ್ತು ಮತ್ತು ಅಲ್ಲಿ ರಕ್ತ ಬರಲು ಪ್ರಾರಂಭವಾಯಿತು ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 10) ಅ.ಸಾ–1 ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ಆರೋಪಿಯು ತನ್ನನ್ನು ಕೊಲೆ ಮಾಡುವ ಉದ್ದೇಶದಿಂದ ಚಾಕುವಿನಿಂದ ಚುಚ್ಚಿ ಅಲ್ಲಿಂದ ಓಡಿ ಹೋದನು ಹಾಗೂ ತನ್ನ ತಂದೆ ಬಂದಾಗ ತಾನು ವಿಷಯವನ್ನು ತಿಳಿಸಿದ್ದು ಅವರ ತನ್ನನ್ನು ಧಾರವಾಡದ ಸಿವಿಲ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋದರು ಮತ್ತು ಆಸ್ಪತ್ರೆಯಲ್ಲಿ ತನಗೆ ಆದ ಗಾಯಕ್ಕೆ ಆರು ಹೊಲಿಗೆಗಳನ್ನು ಹಾಕಿದ್ದಾರೆ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ: 11) ಅ.ಸಾ–1 ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ನಂತರ ಅದೇ ದಿನ ಧಾರವಾಡದ ಶಹರ ಪೋಲೀಸ ಠಾಣೆಯಲ್ಲಿ ತಾನು ನಿಶಾನೆ ಪಿ–1 ದೂರನ್ನು ಕೊಟ್ಟಿದ್ದು, ಮರುದಿನ ಪೋಲೀಸರು ತಮ್ಮ ಮನೆಗೆ ಬಂದಾಗ ತಾನು ಘಟನೆ ಸ್ಥಳವನ್ನು ತೋರಿಸಿದ್ದೇನೆ, ಅಲ್ಲಿ ಪೋಲೀಸರು ಪೋಟೋ ತೆಗೆದರು ಮತ್ತು ನಿಶಾನೆ ಪಿ–2 ರಂತೆ ಪಂಚನಾಮೆಯನ್ನು ಮಾಡಿ ಪೋಟೋವನ್ನು ತೆಗೆದರು, ದೂರು ಕೊಟ್ಟ ನಂತರ ಮತ್ತೆ ಪೋಲೀಸರು ಆರೋಪಿಯನ್ನು ತೋರಿಸಿ ತನ್ನ ಪುನಃ ಹೇಳಿಕೆಯನ್ನು ಪಡೆದಿದ್ದಾರೆ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ: ಸುಳ್ಳು

ಪ್ರಶ್ನೆ: 12) ಅ.ಸಾ–8 ಅಂಬಿಕಾ ಕಟ್ಟಿಮನಿ ಇವರು ತಮ್ಮ ಸಾಕ್ಷಿಯಲ್ಲಿ ಹೇಳಿದ್ದೇನೆಂದರೆ ತಾನು ಬಾಡಿಗೆಗೆ ಇದ್ದ ಪರಶುರಾಮ ಸುಣಗಾರ ಮನೆಯಲ್ಲಿ ತಂದೆ–ತಾಯಿ ಮತ್ತು ನಾಲ್ಕು ಜನ ಹೆಣ್ಣು ಮಕ್ಕಳಿದ್ದು ಬಾಸಾ–1 ತನುಜಾ ಸಹ ಅವರ ಮಗಳಾಗಿದ್ದಳು, ದಿನಾಂಕ 21.02.2022 ರಂದು ಮಧ್ಯಾಹ್ನ 11 ಗಂಟೆಗೆ ತಾನು ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದಾಗ ತನುಜಾಳು ಜೋರಾಗಿ ಚೀರಾಡುವ ಶಬ್ದ ಕೇಳಿಸಿತ್ತು ತಾನು ಕೆಳಗೆ ಬಂದೆ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ: ಸುಳ್ಳು

ಪ್ರಶ್ನೆ 13) ಅ.ಸಾ-8 ರವರು ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ಆಗ ತನುಜಾಳ ಮನೆಯಲ್ಲಿ ಇದ್ದ ಶಿವಶಂಕರ ತನುಜಾಳ ಕಪ್ಪಾಳಕ್ಕೆ ಹೊಡೆದಿದ್ದು, ಮನೆಯಲ್ಲಿ ತಂದೆ ತಾಯಿ ಯಾರು ಇಲ್ಲ ನೀನು ಹೋಗು ಎಂದು ತಾನು ಹೇಳಿದರೂ ಆತನು ಕೇಳಲಿಲ್ಲ ಹಾಗೂ ತನುಜಾಳನ್ನು ಕೊಲೆ ಮಾಡುವ ಉದ್ದೇಶದಿಂದ ಆಕೆಯ ಎಡಗಾಲಿನ ತೊಡೆಯ ಹಿಂದಿನ ಭಾಗಕ್ಕೆ ಚಾಕುವಿನಿಂದ ಚುಚ್ಚಿದಾಗ ಆಕೆ ಜೋರಾಗಿ ಚೀರಿದಳು, ಜನ ಸೇರಿದಾಗ ಆತನು ಓಡಿ ಹೋಗಿರುತ್ತಾನೆ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ 14) ಅ.ಸಾ-8 ರವರು ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ಆಕೆಯ ತಂದೆ ಆಟೋದಲ್ಲಿ ದವಾಖಾನೆಗೆ ಕರೆದುಕೊಂಡು ಹೋಗಿರುತ್ತಾರೆ, ಸದರಿ ಶಿವಶಂಕರ ತನುಜಾಗೆ ಗಂಡನಾಗಿದ್ದು ತನುಜಾಳಿಗೆ ಕಿರುಕುಳ ಕೊಡುತ್ತಿದ್ದು ಹಾಗಾಗಿ ಆಕೆಯು ತವರು ಮನೆಗೆ ಬಂದು ಉಳಿದುಕೊಂಡಿದ್ದಳು ಹಾಗೂ ತಾನು ತನುಜಾಳ ಮನೆಗೆ ಹೋದಾಗ ತನುಜಾಳನ್ನು ಬಿಟ್ಟು ಬೇರೆ ಯಾರು ಇರಲಿಲ್ಲ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ: 15) ಅ.ಸಾ.13 ಪರಶುರಾಮ ಸುಣಗಾರ ಇವರು ತಮ್ಮ ಸಾಕ್ಷಿಯಲ್ಲಿ ಹೇಳಿದ್ದೇನೆಂದರೆ ಸುಮಾರು ಮೂರು ವರ್ಷದ ಹಿಂದೆ ತನ್ನ ಮಗಳನ್ನು ಮನೆಯಿಂದ ಆರೋಪಿಯು ಕರೆದುಕೊಂಡು ಹೋಗಿದ್ದು ಆಕೆಯು ಮನೆ ಬಿಟ್ಟು ಹೋಗಿ ಕೊಲ್ಲಾಪುರದಲ್ಲಿ ಆತನೊಂದಿಗೆ ಇದ್ದಾಳೆ ಎಂದು ಪೋನ ಮಾಡಿ ತಮಗೆ ತಿಳಿಸುತ್ತಿದ್ದಳು, ತನ್ನ ಮಗಳನ್ನು ಆತನು ಕೊಲ್ಲಾಪುರದಲ್ಲಿ ಗೃಹಬಂಧನದಲ್ಲಿ ಇಟ್ಟಿದ್ದ ಎಂದು ಮತ್ತು ತಂದೆ ತಾಯಿಗೆ ನಾನು ಆರಾಮ ಇದ್ದೀನಿ ಎಂದು ಪೋನನಲ್ಲಿ ಹೇಳು ಎಂದು ಚಾಕು ತೋರಿಸಿ ಹೆದರಿಸುತ್ತಿದ್ದ ಹಾಗೂ ಮನೆಯಿಂದ ಹೊರಗೆ ಹೋಗುವಾಗ ಬೀಗ ಹಾಕಿ ಹೋಗುತ್ತಿದ್ದ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ: ಸುಳ್ಳು

ಪ್ರಶ್ನೆ: 16 ಅ.ಸಾ.13 ರವರು ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ತನ್ನ ಮಗಳು ಅಲ್ಲಿಂದ ಆರೋಪಿಯೊಂದಿಗೆ ಧಾರವಾಡಕ್ಕೆ ಬಂದು ತಮಗೆ ಪೋನ ಮಾಡಿ ವಿಷಯ ತಿಳಿಸಿದ್ದು ತಾವು ಹೋಗಿ ಅವಳನ್ನು ಮನೆಗೆ ಕರೆದುಕೊಂಡು ಬಂದಿದ್ದೇವೆ, ತಮ್ಮ ಮನೆಗೆ ಬಂದು ಸುಮಾರು 15 ದಿನಗಳ ನಂತರ ಆರೋಪಿಯು ಮನೆಯ ಹತ್ತಿರ ಬಂದು ನಿಲ್ಲುವುದು ಹೆದರಿಸುವುದು, ಭಯಪಡಿಸುವುದು, ಪೋನ ಮಾಡುವುದು ಮಾಡುತ್ತಿದ್ದ

ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆಃ 17) ಅ.ಸಾ.13 ರವರು ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ದಿನಾಂಕ 21.02.2022 ರಂದು ತಾನು ಗ್ಯಾಸ ಸಿಲೆಂಡರ ತರಲು ಗೋಡೌನಗೆ ಹಾಗೂ ತನ್ನ ಹೆಂಡತಿ ಮಾರ್ಕೆಟಗೆ ಹೋಗಿದ್ದು, ಆಗ ಮನೆಯಲ್ಲಿ ತನ್ನ ಮಗಳು ತನುಜಾ ಒಬ್ಬಳೇ ಇದ್ದಳು, ತಮ್ಮ ಮನೆಯಲ್ಲಿ ಬಾಡಿಗೆಗೆ ಎಂದು ಅಂಬಿಕಾ ಕಟ್ಟಿಮನಿ ಮೇಲಿನ ಅಂತಸ್ತಲ್ಲಿ ಇದ್ದಳು ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆಃ 18) ಅ.ಸಾ.13 ರವರು ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ತಾನು ಸಿಲೆಂಡರ ತೆಗೆದುಕೊಂಡು ಮನೆಗೆ ಬಂದಾಗ ಮನೆಯ ಹತ್ತಿರ ಜನರು ಕೂಡಿದ್ದು ತನುಜಾ ಮತ್ತು ಅಂಬಿಕಾಳಿಗೆ ಏನಾಯಿತು ಎಂದು ವಿಷಯ ಕೇಳಿದೆನು, ತನುಜಾಳಿಗೆ ತೊಡೆಯ ಹತ್ತಿರ ಚಾಕು ಹಾಕಿದ್ದು ಗಾಯವಾಗಿ ರಕ್ತ ಬರುತ್ತಿತ್ತು ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ: 19) ಅ.ಸಾ.13 ರವರು ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ತಾನು ತನುಜಾಳನ್ನು ವಿಚಾರಿಸಿದಾಗ ಶಿವಶಂಕರನು ಮನೆಗೆ ಬಂದು ತನುಜಾಳ ಕಪ್ಪಾಳಕ್ಕೆ ಹೊಡೆದಾ ಎಂದು ಆಗ ಅಂಬಿಕಾಳು ಬಂದು ಮನೆಯಲ್ಲಿ ತಂದೆ ತಾಯಿ ಯಾರು ಇಲ್ಲ ನೀನು ಹೋಗು ಎಂದು ಆಕೆ ಹೇಳಿದ್ದು ಆತನು ಮನೆಯಿಂದ ಹೊರಗೆ ಹೋದಂತೆ ಮಾಡಿ ಪುನಃ ಬಂದು ತನುಜಾಳ ಎಡಗಾಲಿನ ತೊಡೆಯ ಹಿಂದಿನ ಭಾಗಕ್ಕೆ ಚಾಕುವಿನಿಂದ ಚುಚ್ಚಿದ ಎಂದು ಹೇಳಿದಳು ಮತ್ತು ಆತನು ತನುಜಾಳನ್ನು ಕೊಲೆ ಮಾಡುವ ಉದ್ದೇಶದಿಂದ ಚಾಕುವಿನಿಂದ ಚುಚ್ಚಿ ಸ್ಥಳದಿಂದ ಓಡಿಹೋಗಿದ್ದಾನೆ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ: ಸುಳ್ಳು

ಪ್ರಶ್ನೆ: 20) ಅ.ಸಾ.13 ರವರು ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ತಾವು ಆಕೆಯನ್ನು ಸಮಾಧಾನ ಮಾಡಿ ಭೀಮಪ್ಪನ ಆಟೋದಲ್ಲಿ ಜಿಲ್ಲಾ ದವಾಖಾನೆಗೆ ಕರೆದುಕೊಂಡು ಹೋಗಿ, ಅಲ್ಲಿಂದ ವಿಷಯ ತಿಳಿಸಿ ಪೋಲಿಸಠಾಣೆಗೆ ಬಂದು ಫಿರ್ಯಾದಿಯನ್ನು ಮಗಳು ಕೊಟ್ಟಿದ್ದಾಳೆ, ಫಿರ್ಯಾದಿ ಕೊಟ್ಟ ನಂತರ ಪೋಲಿಸರು ಮನೆಗೆ ಬಂದು ಪಂಚನಾಮೆ ಮಾಡಿದ್ದಾರೆ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ: ಸುಳ್ಳು

ಪ್ರಶ್ನೆ: 21) ಅ.ಸಾ.13 ರವರು ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ನಂತರ ಆಕೆಯ ರಕ್ತ ತಾಗಿದ ಬಟ್ಟೆಯನ್ನು ತಂದು ಕೊಡುವಂತೆ ಹೇಳಿದ್ದರಿಂದ ಆಕೆ ಉಟ್ಟಿದ್ದ ಬಟ್ಟೆಯನ್ನು ಪೋಲಿಸರಿಗೆ ತಾನು ತೆಗೆದುಕೊಂಡು ಹೋಗಿ ಕೊಟ್ಟಿದ್ದು ಪೋಲಿಸರು ಠಾಣೆಯಲ್ಲಿ ಸದರಿ ಬಟ್ಟೆಯನ್ನು ನಿಶಾನೆ ಪಿ-5 ರ ಪ್ರಕಾರ ಪಂಚನಾಮೆ ಮಾಡಿ ಸ್ಥಳದಲ್ಲಿ ನಿಶಾನೆ ಪಿ-6 ಮತ್ತು 7 ರ ಪ್ರಕಾರ ಪೋಟೋಗಳನ್ನು ಪೋಲಿಸರು ತೆಗೆದಿದ್ದಾರೆ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ: ಸುಳ್ಳು

ಪ್ರಶ್ನೆ: 22) ಅ.ಸಾ.13 ರವರು ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ನಂತರ ಅದೇ ದಿನ ರಾತ್ರಿ ತಮಗೆ ಪೋಲಿಸರು ಪೋನ ಮಾಡಿ ಆರೋಪಿಯನ್ನು ಹಿಡಿದಿದ್ದೇವೆ ಗುರುತಿಸಲು ಬನ್ನಿ ಎಂದು ಕರೆದಿದ್ದು ತಾನು ಮತ್ತು ಮಗಳು ಹೋಗಿ ಠಾಣೆಯಲ್ಲಿ ಇರಿಸಿದ್ದ ಆತನನ್ನು ನೋಡಿ ಗುರುತಿಸಿ ಈ ಬಗ್ಗೆ ತಾನು ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ ಹಾಗೂ ಅಂಬಿಕಾರವರು ನಾಲ್ಕು ವರ್ಷದಿಂದ ತಮ್ಮ ಮನೆಯಲ್ಲಿ ಬಾಡಿಗೆಗೆ ಇದ್ದ ಬಗ್ಗೆಯೂ ಸಹ ಪೋಲಿಸರಲ್ಲಿ ಹೇಳಿದ್ದೇನೆ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ: ಸುಳ್ಳು

ಪ್ರಶ್ನೆ: 23) ಅ.ಸಾ.14 ಡಾಃ ಶ್ರೀನಿವಾಸಲು ಇವರು ತಮ್ಮ ಸಾಕ್ಷಿಯಲ್ಲಿ ಹೇಳಿದ್ದೇನೆಂದರೆ ದಿನಾಂಕ 21.02.2022 ರಂದು ಅಪರಾಹ್ನ 12.40 ಕ್ಕೆ ತನುಜಾ ಪರಶುರಾಮ ಸುಣಗಾರ ಎಂಬ ಮಹಿಳೆಯನ್ನು ಹಲ್ಲೆ ಹಿನ್ನೆಲೆಯೊಂದಿಗೆ ಆಕೆಯ ತಂದೆ ಪರೀಕ್ಷೆಗಾಗಿ ಹಾಜರುಪಡಿಸಿದ್ದು, ಅವರನ್ನು ಪರೀಕ್ಷಿಸಿದಾಗ ಸೊಂಟದ ಎಡಚಪ್ಪೆಯ ಮೇಲೆ 2 x ½ x ½ ಸೆಂ.ಮೀ. ಇರಿತದ ಸಾಮಾನ್ಯ ಸ್ವರೂಪದ ಗಾಯವಿದ್ದು, ಸದರಿ ಗಾಯವು ತಾಜಾ ಗಾಯವಾಗಿದ್ದು ಹರಿತವಾದ ವಸ್ತುವಿನಿಂದ ಮಾಡಿದ್ದು ಇರುತ್ತದೆ ಎಂದು ನಿಶಾನೆ ಪಿ–17 ರ ಪ್ರಕಾರ ಗಾಯದ ಪ್ರಮಾಣ ಪತ್ರ ಕೊಟ್ಟಿರುತ್ತೇನೆ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ: 24) ಅ.ಸಾ.14 ರವರು ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ದಿನಾಂಕ 17.06.2023 ರಂದು ಒಂದು ಕೋರಿಕೆ ಪತ್ರವನ್ನು ಧಾರವಾಡ ಶಹರ ಪೋಲಿಸಠಾಣೆಯ ಸಬ ಇನ್ಸಪೆಕ್ಟರರವರು ಕಳಿಸಿದ್ದು ಅಪರಾಧ ಸಂಖ್ಯೆ 27/2022 ರಲ್ಲಿ ತನುಜಾ ಸುಣಗಾರ ಇವರಿಗೆ ಆದ ಗಾಯವು ಸೀಲು ಮಾಡಿ ಕಳುಹಿಸಿದ ಆಯುಧದಿಂದ ಆಗಬಹುದೇ ಎಂದು ಬರೆದಿದ್ದು, ಸದರಿ ಸೀಲು ಮಾಡಿದ ವಸ್ತುವಿನ ಮೇಲೆ ಎಫಎಸಎಲ ಬೆಳಗಾವಿಯ ಸೀಲು ಇತ್ತು ಹಾಗೂ ಸೀಲು ಇನಟ್ಯಾಕ್ಟ ಇತ್ತು ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ

ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆಃ 25) ಅ.ಸಾ.14 ರವರು ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ಆಯುಧವನ್ನು ಪರೀಕ್ಷಿಸಿದಾಗ ಪ್ಲಾಸ್ಟಿಕ ಹ್ಯಾಂಡಲನ ಒಂದು ಚಾಕು ಇದ್ದು ಅದರ ಉದ್ದ 24 ಸೆಂ.ಮೀ , ಅಗಲ 2 ಸೆಂ.ಮೀ ಪ್ಲಾಸ್ಟಿಕ ಹ್ಯಾಂಡಲ 11 ಸೆಂ.ಮೀ ಇತ್ತು, ಕಬ್ಬಿಣದ ಭಾಗ 13 ಸೆಂ.ಮೀ ಇತ್ತು, ಅದನ್ನು ಪರೀಕ್ಷಿಸಿದಾಗ ತನುಜಾರವರಿಗೆ ಆದ ಗಾಯಗಳು ಈ ಆಯುಧದಿಂದ ಆಗಬಹುದು ಎಂದು ನಿಶಾನೆ ಪಿ-18 ರಂತೆ ಅಭಿಪ್ರಾಯಕೊಟ್ಟು ನಂತರ ಅದನ್ನು ಪುನಃ ತಮ್ಮ ಆಸ್ಪತ್ರೆಯ ಸೀಲನೊಂದಿಗೆ ಪ್ಯಾಕ ಮಾಡಿ ಪಿಸಿ ನಂ.2736 ಎಸ ಎನ ಬಿರಾದಾರ ರವರಿಗೆ ಕೊಟ್ಟಿರುತ್ತೇನೆ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆಃ 26) ಅ.ಸಾ.15 ಚೈತ್ರಾ ಅವರಾಧಿ ಇವರು ತಮ್ಮ ಸಾಕ್ಷಿಯಲ್ಲಿ ಹೇಳಿದ್ದೇನೆಂದರೆ ಧಾರವಾಡ ಶಹರ ಪೋಲಿಸಠಾಣೆ ಗುನ್ನಾ ನಂ. 27/2022 ಕಲಂ 452, 323, 324, 307, 504, 506 ಐಪಿಸಿಯ ಪ್ರಕರಣದಲ್ಲಿ ಘಟನಾ ಸ್ಥಳದ ಪಂಚನಾಮೆ ಕಾಲಕ್ಕೆ, ಬಟ್ಟೆ ಜಪ್ತ ಪಂಚನಾಮೆ ಕಾಲಕ್ಕೆ ಮತ್ತು ಆರೋಪಿತನು ಹಾಜರುಪಡಿಸಿದ ಬಟ್ಟೆ ಜಪ್ತ ಪಂಚನಾಮೆ ಕಾಲಕ್ಕೆ ತನಿಖಾಧಿಕಾರಿ ಚಾಸಾ.24

ರವರ ಆದೇಶದ ಪ್ರಕಾರ ತನಿಖಾ ಸಹಾಯಕಳಾಗಿ ಮತ್ತು ಪೊಟೋಗ್ರಾಪರ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಗೊತ್ತಿಲ್ಲ

ಪ್ರಶ್ನೆಃ 27) ಅ.ಸಾ.15 ರವರು ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ತನಿಖಾ ಕಾಲಕ್ಕೆ ತಮ್ಮ ಠಾಣೆಗೆ ಕೊಡಲಾದ ಡಿಜಿಟಲ್ ಕ್ಯಾಮರಾದ ಮುಖಾಂತರ ಮೇಲೆ ಹೇಳಿದ ಪೋಟೋಗಳನ್ನು ತೆಗೆದು ಮೆಮೋರಿ ಕಾರ್ಡನಿಂದ ಕಂಪ್ಯೂಟರಗೆ ಡೌನಲೋಡ ಮಾಡಿ ಅದನ್ನು ಸಿಡಿಯಲ್ಲಿ ವರ್ಗಾಯಿಸಿ, ಕೆನಾನ ಪ್ರಿಂಟರನಿಂದ ಪೋಟೋಗಳನ್ನು ಪ್ರಿಂಟ ಮಾಡಿ ತನಿಖಾಧಿಕಾರಿಗಳಿಗೆ ಕೊಟ್ಟಿದ್ದೇನೆ ಹಾಗೂ ಸದರಿ ಪೋಟೋಗಳನ್ನು ಯಾವುದೇ ಎಡಿಟ ಮಾಡದೇ ಸಿಡಿಗೆ ವರ್ಗಾವಣೆ ಮಾಡಿ ಸಿಡಿಯನ್ನು ಸಹ ತನಿಖಾಧಿಕಾರಿಗೆ ಕೊಟ್ಟಿರುತ್ತೇನೆ ಎಂದು ಕಲಂ 65 ಬಿ ಭಾರತೀಯ ಸಾಕ್ಷ್ಯ ಅಧಿನಿಯಮದ ಪ್ರಕಾರ ಪ್ರಮಾಣ ಪತ್ರ ಕೊಟ್ಟಿರುತ್ತೇನೆ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಗೊತ್ತಿಲ್ಲ

ಪ್ರಶ್ನೆಃ 28) ಅ.ಸಾ.16 ಮಹೇಂದ್ರ ಕುರ್ತಕೋಟಿ ಇವರು ತಮ್ಮ ಸಾಕ್ಷಿಯಲ್ಲಿ ಹೇಳಿದ್ದೇನೆಂದರೆ ದಿನಾಂಕ 21.02.2022 ರಂದು ಠಾಣಾ

ಪ್ರಭಾರದಲ್ಲಿದ್ದಾಗ ಸಾಯಂಕಾಲ 8.00 ಗಂಟೆಗೆ ತನುಜಾ ಸುಣಗಾರ ಎಂಬುವವರು ಠಾಣೆಗೆ ಹಾಜರಾಗಿ ಕೊಟ್ಟ ಲಿಖಿತ ದೂರನ್ನು ಸ್ವೀಕರಿಸಿ ಅದನ್ನು ಠಾಣಾ ಗುನ್ನಾ ನಂಬರ 27/2022 ಕಲಂ 452, 323, 324, 307, 504, 506 ಐಪಿಸಿ ಪ್ರಕಾರ ಪ್ರಕರಣವನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಚಾಸಾ.21 ರವರ ಮುಖಾಂತರ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಗೊತ್ತಿಲ್ಲ

ಪ್ರಶ್ನೆಃ 29) ಅ.ಸಾ.16 ರವರು ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ರಾತ್ರಿ 9.30 ಗಂಟೆಗೆ ಆರೋಪಿಯನ್ನು ಹುಡುಕಲು ಕ್ರೈಂ ಸಿಬ್ಬಂದಿಯನ್ನು ನೇಮಿಸಿ, ನಂತರ ಮರುದಿನ 22.02.2022 ರಂದು ತಾನು ಘಟನಾ ಸ್ಥಳಕ್ಕೆ ಹೋಗಿ ದವಳೆ ಮತ್ತು ರಾಜು ಶೇಖಪ್ಪಾ ಕಟ್ಟಿ ಎಂಬುವವರನ್ನು ಪಂಚರಾಗಿ ಕರೆಸಿ ಫಿರ್ಯಾದುದಾರಳಾದ ತನುಜಾ ತೋರಿಸಿದ ಸ್ಥಳದಲ್ಲಿ ನಿಶಾನೆ ಪಿ-2 ರಂತೆ ಘಟನಾ ಸ್ಥಳದ ಪಂಚನಾಮೆಯನ್ನು ಮಾಡಿ ನಿಶಾನೆ ಪಿ-3 ಮತ್ತು 4 ರಂತೆ ಸ್ಥಳದಲ್ಲಿ ಫೋಟೋ ತೆಗೆದಿದ್ದೇನೆ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಗೊತ್ತಿಲ್ಲ

ಪ್ರಶ್ನೆಃ 30) ಅ.ಸಾ.16 ರವರು ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ಫಿರ್ಯಾದಿಯ ತಂದೆಯು ಬಟ್ಟೆಯನ್ನು ತಂದು ಠಾಣೆಗೆ ಹಾಜರುಪಡಿಸಿದ ಫಿರ್ಯಾದಿಯ ಬಟ್ಟೆ ಜಪ್ತ ಪಂಚನಾಮೆಯನ್ನು ದಿನಾಂಕ 22.02.2022 ರಂದು ಸಾಯಂಕಾಲ 16 ರಿಂದ 17 ಗಂಟೆವೆರೆಗೆ ನಿಶಾನೆ ಪಿ–5 ರಂತೆ ಮಾಡಿ ನಿಶಾನೆ ಪಿ–6 ಮತ್ತು 7 ರ ಪ್ರಕಾರ ಪೋಟೋವನ್ನು ಸ್ಥಳದಲ್ಲಿ ತೆಗೆದಿರುತ್ತೇನೆ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಗೊತ್ತಿಲ್ಲ

ಪ್ರಶ್ನೆಃ 31) ಅ.ಸಾ.16 ರವರು ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ಚಾಸಾ.10, 11, 12, 13, 14, 15, 16, 17 ರವರ ಹೇಳಿಕೆ ಪಡೆದು ಅದೇ ದಿನ ರಾತ್ರಿ 23.00 ಗಂಟೆಗೆ ಧಾರವಾಡ ಸವದತ್ತಿ ರಸ್ತೆ ಡಿಪೋ ಸರ್ಕಲ ಹತ್ತಿರ ತಾನು ಮತ್ತು ಸಿಬ್ಬಂದಿಗಳು ಆರೋಪಿತನನ್ನು ದಸ್ತಗಿರಿ ಮಾಡಿ ಠಾಣೆಗೆ ತಂದಿದ್ದು ಆತನನ್ನು ದಸ್ತಗಿರಿ ಮಾಡಿ ಆತನ ಸ್ವಇಚ್ಚಾ ಹೇಳಿಕೆ ಪಡೆದಿರುತ್ತೇನೆ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಹೌದು

ಪ್ರಶ್ನೆಃ 32) ಅ.ಸಾ.16 ರವರು ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ಕೃತ್ಯ ಮಾಡಿದ ಸಮಯದಲ್ಲಿ ಆತನು ಧರಿಸಿದ್ದ ಬಟ್ಟೆಗಳಲ್ಲಿ ರಕ್ತದ ಕಲೆಗಳು

ಇದ್ದು ಅದನ್ನು ಪಂಚರಿಗೆ ನೋಟೀಸು ಕೊಟ್ಟು ಕರೆಸಿ ಅವರ ಸಮಕ್ಷಮ ನಿಶಾನೆ ಪಿ-11 ರ ಪ್ರಕಾರ ಪಂಚನಾಮೆಯನ್ನು ದಿನಾಂಕ 22.02.2022 ರಂದು ಮಾಡಿರುತ್ತೇನೆ ಹಾಗೂ ಆರೋಪಿತನ ಮನೆಯಿಂದ ಬದಲಿ ಬಟ್ಟೆಯನ್ನು ತರಿಸಿ ಅದನ್ನು ಹಾಕಿಸಿ ಈ ಬಟ್ಟೆಗಳನ್ನು ಜಪ್ತಪಡಿಸಿಕೊಂಡು ನಿಶಾನೆ ಪಿ-12 ಮತ್ತು 13 ರ ಪ್ರಕಾರ ಪೋಟೋ ತೆಗೆದಿರುತ್ತೇನೆ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ: 33) ಅ.ಸಾ.16 ರವರು ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ದಿನಾಂಕ 23.02.2022 ರಂದು ಚಾಸಾ 6 ಮತ್ತು 7 ರವರನ್ನು ಪಂಚರಾಗಿ ಕರೆಸಿ ಆರೋಪಿಯು ತಮ್ಮನ್ನು ಹಾವೇರಿ ಪೇಟೆಯ ಮೇದಾರ ಓಣಿಯಲ್ಲಿರುವ ಆತನ ವಾಸದ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ಬಚ್ಚಿಟ್ಟಿದ್ದ ಪ್ಲಾಸ್ಟಿಕ ಕೈಹಿಡಿಯ ಚಾಕುವನ್ನು ಸ್ಥಳದಲ್ಲಿ ಪ್ಯಾಕ ಮಾಡಿ ಸೀಲು ಮಾಡಿ ಜಪ್ತ ಮಾಡಿಕೊಂಡು ನಿಶಾನೆ ಪಿ-8 ರಂತೆ ಪಂಚನಾಮೆಯನ್ನು ಮಾಡಿ ನಿಶಾನೆ ಪಿ-9 ಮತ್ತು 10 ರಂತೆ ಪೋಟೋಗಳನ್ನು ತೆಗೆದಿರುತ್ತೇನೆ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಸುಳ್ಳು

ಪ್ರಶ್ನೆ: 34) ಅ.ಸಾ.16 ರವರು ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ

ಚಾಸಾ.15, 16, 17 ಇವರ ಪುನರ ಹೇಳಿಕೆ ಪಡೆದುಕೊಂಡು ಚಾಸಾ.23 ರವರು ಘಟನಾ ಸ್ಥಳದಲ್ಲಿ ಮತ್ತು ಪಂಚನಾಮೆ ಕಾಲದಲ್ಲಿ ತೆಗೆದ ಪೋಟೋಗಳನ್ನು ಪ್ರಿಂಟ ತೆಗೆದು ಅದರ ಪ್ರತಿಯನ್ನು ಮತ್ತು ಸಿಡಿಯನ್ನು ತನಗೆ ಕೊಟ್ಟು ಕಲಂ 65 (ಬಿ) ಭಾರತೀಯ ಸಾಕ್ಷ್ಯ ಅಧಿನಿಯಮದಡಿಯಲ್ಲಿ ಸರ್ಟಿಪಿಕೇಟನ್ನು ನಿಶಾನೆ ಪಿ-19 ರ ಪ್ರಕಾರ ಕೊಟ್ಟಿರುತ್ತಾರೆ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಗೊತ್ತಿಲ್ಲ

ಪ್ರಶ್ನೆಃ 35) ಅ.ಸಾ.16 ರವರು ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ದಿನಾಂಕ 04.03.2022 ರಂದು ಜಪ್ತ ಮಾಡಿದ ವಸ್ತುಗಳನ್ನು ಎಪಎಸಎಲ್ ಬೆಳಗಾವಿ ಇವರಿಗೆ ಚಾಸಾ.22 ರವರ ಮುಖಾಂತರ ಕಳಿಸಿಕೊಟ್ಟು, ದಿನಾಂಕ 05.03.2022 ರಂದು ಫಿರ್ಯಾದಿಯ ಗಾಯದ ಪ್ರಮಾಣ ಪತ್ರ ಕೊಡುವಂತೆ ವೈದ್ಯರಿಗೆ ಪತ್ರ ಬರೆದಿದ್ದು ದಿನಾಂಕ 16.03.2022 ರಂದು ವೈದ್ಯರು ಗಾಯದ ಪ್ರಮಾಣ ಪತ್ರವನ್ನು ಕೊಟ್ಟು ಗಾಯವು ಸಾದಾ ಸ್ವರೂಪದ ಗಾಯವಾಗಿದ್ದು ಹರಿತವಾದ ವಸ್ತುವಿನಿಂದ ಆಗುವ ಸಾಧ್ಯತೆ ಇದೆ ಎಂದು ನಿಶಾನೆ ಪಿ-17 ರಂತೆ ತಮ್ಮ ಅಭಿಪ್ರಾಯ ಕೊಟ್ಟಿರುತ್ತಾರೆ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಗೊತ್ತಿಲ್ಲ

ಪ್ರಶ್ನೆ: 36) ಅ.ಸಾ.16 ರವರು ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ದಿನಾಂಕ 22.02.2022 ರಂದು ಮಾನ್ಯ ಸಹಾಯಕ ಆಯುಕ್ತರು, ವಲಯ ಕಚೇರಿ, ಹುಬ್ಬಳ್ಳಿ ಧಾರವಾಡ ಇವರಲ್ಲಿ ಕೃತ್ಯ ನಡೆದ ಸ್ಥಳವಾದ ಫಿರ್ಯಾದಿಯ ತಂದೆ ಪರಶುರಾಮ ಹನುಮಂತಪ್ಪ ಸುಣಗಾರ ಇವರ ಮನೆಯ ಉತಾರ ಕೊಡುವಂತೆ ನಿಶಾನೆ ಪಿ–26 ರಂತೆ ಪತ್ರ ಬರೆದಿದ್ದು ನಿಶಾನೆ ಪಿ–16 ರ ಪ್ರಕಾರ ಉತಾರೆಯನ್ನು ಪಡೆದುಕೊಂಡು ತನಿಖೆಯನ್ನು ಪೂರೈಸಿ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ: ಗೊತ್ತಿಲ್ಲ

ಪ್ರಶ್ನೆ: 37) ಅ.ಸಾ.16 ರವರು ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ದಿನಾಂಕ 27.03.2023 ರಂದು ಎಫಎಸಎಲಗೆ ಕಳಿಸಿದ ಎಲ್ಲಾ ಆರ್ಟಿಕಲಗಳು ವರದಿಯೊಂದಿಗೆ ವಾಪಸು ಬಂದಿದ್ದನ್ನು ಪಡೆದು ದಿನಾಂಕ 17.06.2023 ರಂದು ಜಪ್ತಪಡಿಸಿದ ಚಾಕುವಿನ ಪೈನಲ ಒಪಿನಿಯನನ್ನು ತೆಗೆದುಕೊಳ್ಳಲು ಚಾಕು ಮತ್ತು ಕೋರಿಕೆ ಪತ್ರ ಕಳಿಸಿಕೊಟ್ಟಿದ್ದು ನಿಶಾನೆ ಪಿ–18 ರ ಪ್ರಕಾರ ವೈದ್ಯರು ಅದೇ ದಿನ ಅವರ ಪೈನಲ ಒಪಿನಿಯನ್ನನ್ನು ನೀಡಿ ಚಾಕುವನ್ನು ಪ್ಯಾಕ ಮಾಡಿ ಸೀಲು ಮಾಡಿ ಡಿಸ್ಟ್ರಿಕ್ಟ ಆಸ್ಪತ್ರೆಯ ಸೀಲು ಹಾಕಿ ಕಳಿಸಿದ್ದು ನ್ಯಾಯಾಲಯಕ್ಕೆ ನೀಡಿರುತ್ತೇನೆ

ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಗೊತ್ತಿಲ್ಲ

ಪ್ರಶ್ನೆ 38) ಅ.ಸಾ.17 ಡಾಃಭುವನೇಶ್ವರಿ ಎಂ ಎಸ ಇವರು ತಮ್ಮ ಸಾಕ್ಷಿಯಲ್ಲಿ ಹೇಳಿದ್ದೇನೆಂದರೆ ದಿನಾಂಕ 04.03.2022 ರಂದು ಧಾರವಾಡ ಶಹರ ಪೋಲಿಸಠಾಣೆಯ ಕ್ರೈಂ ನಂಬರ 27/2022 ರಲ್ಲಿ ಒಟ್ಟು ಒಂಬತ್ತು ಸೀಲ್ಡ ಆದ ಸ್ಥಿತಿಯಲ್ಲಿದ್ದ ಆರ್ಟಿಕಲಗಳನ್ನು ತನ್ನ ಕಚೇರಿಗೆ ಚನ್ನಬಸಪ್ಪ ಎನ್ ಸಿಪಿಸಿ 2183 ರವರು ತಂದು ಹಾಜರುಪಡಿಸಿದ್ದು, ಅದರ ಜೊತೆಗೆ ಕೋರಿಕೆ ಪತ್ರವನ್ನು ಕಳುಹಿಸಿಕೊಟ್ಟಿದ್ದು, ಆರ್ಟಿಕಲಗಳನ್ನು ನೋಡಲಾಗಿ ಅದರ ಮೇಲಿರುವ ಮಾದರಿ ಸೀಲು ಹಾಗೂ ಇನವಾಯಿಸಿಗೆ ತಾಳೆಯಾಗಿದ್ದು, ಸ್ವೀಕೃತಿ ಪತ್ರವನ್ನು ನೀಡಿರುತ್ತಾರೆ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಗೊತ್ತಿಲ್ಲ

ಪ್ರಶ್ನೆ 39) ಅ.ಸಾ.17 ರವರು ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ಅದೇ ದಿನ ಸದರಿ ವಸ್ತುಗಳನ್ನು ತನಗೆ ಪರೀಕ್ಷೆಗಾಗಿ ಕೊಟ್ಟಿದ್ದು, ದಿನಾಂಕ 27.06.2022 ರಂದು ಸೀಲು ತೆರೆದು ಸದರಿ ಆರ್ಟಿಕಲಗಳನ್ನು ಅಂದರೆ ಚಾಕು, ಟಾಪ್ , ಪ್ಯಾಂಟ, ವೇಲ್, ಅಂಡರವೇರ, ಬ್ರಾ, ಜೀನ್ಸ ಪ್ಯಾಂಟ,

ಎರಡು ಟೀ ಶರ್ಟು ಇವುಗಳನ್ನು ಪರೀಕ್ಷೆಗೆ ಒಳಪಡಿಸಿರುತ್ತೇನೆ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಗೊತ್ತಿಲ್ಲ

ಪ್ರಶ್ನೆ: 40) ಅ.ಸಾ.17 ರವರು ತಮ್ಮ ಸಾಕ್ಷಿಯಲ್ಲಿ ಮುಂದುವರೆದು ಹೇಳಿದ್ದೇನೆಂದರೆ ಸದರಿ ವಸ್ತುಗಳ ಮೇಲೆ ರಕ್ತದ ಕಲೆ ಇದೆಯಾ ಮತ್ತು ಇದ್ದಲ್ಲಿ ಯಾವ ಗುಂಪಿಗೆ ಸೇರಿದ ರಕ್ತ ಎಂದು ಪರೀಕ್ಷಿಸಲು ತನಿಖಾಧಿಕಾರಿಯು ಕೋರಿಕೊಂಡಿದ್ದು ತಾನು ಪರೀಕ್ಷಿಸಿ ಈ ಕೆಳಕಂಡಂತೆ ನಿಶಾನೆ ಪಿ–21 ರಂತೆ ಅಭಿಪ್ರಾಯ ಕೊಟ್ಟಿರುತ್ತೇನೆ ಹಾಗೂ ಪರೀಕ್ಷೆಯ ನಂತರ ಎಲ್ಲಾ ವಸ್ತುಗಳನ್ನು ಪ್ಯಾಕ ಮಾಡಿ ತಮ್ಮ ಕಚೇರಿಯ ಸೀಲ ಹಾಕಿ ತಮ್ಮ ಸ್ಯಾಂಪಲ ಸೀಲನ್ನು ಮತ್ತು ವರದಿಯನ್ನು ಕಚೇರಿಯ ಮುಖಾಂತರ ಕಳಿಸಿಕೊಟ್ಟಿರುತ್ತೇನೆ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ ಗೊತ್ತಿಲ್ಲ

ಪ್ರಶ್ನೆ: 41) ನಿಮ್ಮ ಮೇಲಿನ ಈ ಪ್ರಕರಣದ ಬಗ್ಗೆ ಹೆಚ್ಚಿಗೆ ಎನಾದರೂ ಹೇಳುವುದಿದೆಯೇ?

ಉತ್ತರಃ ಎಲ್ಲಾ ಸುಳ್ಳು ಆಪಾದನೆ ಹಾಕಿದ್ದಾರೆ . ಫಿರ್ಯಾದಿ ನನ್ನ ಪ್ರೆಂಡ ಆಗಿದ್ದು ಆಪರೇಶನಗೆ 2 ಲಕ್ಷ ಹಣ ಕೇಳಿದ್ದಳು ನಾನು ಇಲ್ಲಾ ಎಂದಿದ್ದೆ ಅದಕ್ಕೆ ಇಷ್ಟೆಲ್ಲಾ ಸುಳ್ಳು ಕತೆ ಕಟ್ಟಿದ್ದಾರೆ ಸುಳ್ಳು ಕೇಸು ಹಾಕಿದ್ದಾರೆ.

ಪ್ರಶ್ನೆ: 42) ನೀವು ಅಭಿರಕ್ಷೆ ಪರ ಸಾಕ್ಷಿಗಳನ್ನು ವಿಚಾರಣೆ ಮಾಡುವುದಿದೆಯಾ?

ಉತ್ತರ: ಇಲ್ಲ

(ಆರೋಪಿಗೆ ಮೇಲಿನ ಪ್ರಶ್ನೆಗಳನ್ನು ಓದಿ ಹೇಳಿ ವಿವರಿಸಿದ್ದು, ಆತನು ಅದನ್ನು ಸರಿಯಾಗಿ ತಿಳಿದುಕೊಂಡು ಉತ್ತರಿಸಿದ್ದಾನೆ ಎಂಬುವುದಾಗಿ ಈ ಮೂಲಕ ದೃಢೀಕರಿಸುತ್ತೇನೆ).

ದಿನಾಂಕ: 06.07.2026

(ಪೂರ್ಣಿಮಾ ಎನ್ ಪೈ)
4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಧಾರವಾಡ.